**ಅಸಲು ದಾವಾ ಸಂಖ್ಯೆಃ 974/2017**

**ಪಿ.ಡಬ್ಲ್ಯೂ -1**

**ದಿನಾಂಕ 07-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಸಿ.ಎಸ್.ಹೆಚ್. ರವರಿಂದಃ-**

ಈ ದಾವೆಯನ್ನು ಹೂಡಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ದಾವಾ ಸ್ವತ್ತು ನನ್ನ ಗಂಡನ ಸ್ವತ್ತು. ನಾನು ಶಾಲೆಯನ್ನು ಓದಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಗಂಡನಿಗೆ ಒಬ್ಬ ಅಣ್ಣ ಇದ್ದರು , ಅವರು ಈಗ ಮರಣ ಹೊಂದಿದ್ದಾರೆ. ಅಕ್ಕತಂಗಿಯರು 4 ಮಂದಿ ಇದ್ದರು , ಅವರು ಈಗ ಮರಣ ಹೊಂದಿದ್ದಾರೆ. ನನ್ನ ಗಂಡನ ಅಕ್ಕತಂಗಿಯರಿಗೆ ಮದುವೆಯಾಗಿದ್ದರೂ ಗಂಡನ ಮನೆಗೆ ಹೋಗಿರಲಿಲ್ಲ, ನಮ್ಮ ಊರಿನಲ್ಲಿಯೇ ಮರಣ ಹೊಂದಿದ್ದಾರೆ. ನನ್ನ ಗಂಡನ ತಮ್ಮನ ಹೆಸರು ಸುರೇಶ ಯಲ್ಲಪ್ಪ. ಸುರೇಶ ಯಲ್ಲಪ್ಪ ಈಗ ಜೊಯಡಾ ತಾಲ್ಲೂಕು, ಭಗವತಿಯಲ್ಲಿ ಇದ್ದಾರೆ ಎಂದರೆ ಇರಬಹುದು, ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಸುರೇಶನಿಗೆ ಮತ್ತು ನನ್ನ ಗಂಡನಿಗೆ ಸಮಪಾಲು ಇದೆ ಎಂದರೆ ಸರಿ. ದಾವಾ ಸ್ವತ್ತನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಹೊಲ ಮನೆಗಳು ಇವೆ , ಅವುಗಳ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ . ದಾವಾ ಸ್ವತ್ತು ಕೊಡದೇವನಗಲ್ಲಿ , ಮುಚ್ಚಂಡಿಯಲ್ಲಿ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದರಲ್ಲಿ ಮನೆ ಮತ್ತು ಹಿತ್ತಲು ಇದೆ ಎನ್ನುತ್ತಾರೆ. ಮನೆ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ , ನಾನು ಶಾಲೆ ಓದಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ಮಲ್ಲವ್ವನ ಮನೆ, ಪಶ್ಚಿಮಕ್ಕೆ ತಂಗ್ಯವ್ವಳ ಮನೆ, ಉತ್ತರ ದಿಕ್ಕಿಗೆ ರಸ್ತೆ, ದಕ್ಷಿಣ ದಿಕ್ಕಿಗೆ ಗೋಕಾಕ್ ರಸ್ತೆ ಇರುತ್ತದೆ. ದಾವಾ ಸ್ವತ್ತಿನಲ್ಲಿ ಇರುವ ನಮ್ಮ ಹಳೇ ಮನೆ 20 ಅಡಿ ಅಗಲ ಇದ್ದು ಅಂದಾಜು 1 ಗುಂಟೆಯಲ್ಲಿ ಹಳೇ ಮನೆಯನ್ನು ಕಟ್ಟಲಾಗಿದೆ ಎನ್ನುತ್ತಾರೆ.

**2.** ದಾವಾ ಸ್ವತ್ತು ಗ್ರಾಮ ಠಾಣಾ ಎಂದರೆ ಸರಿ. ಗ್ರಾಮ ಪಂಚಾಯಿತಿ ಸಂಖ್ಯೆ 140 ರಲ್ಲಿ ಉದ್ದ ಅಗಲ 20X300 ಅಡಿ ಜಾಗ ಇದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದರಲ್ಲಿ ಎಲ್ಲಿಯೂ ಅದರ ಕ್ಷೇತ್ರ 20X300 ಅಡಿ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು, ಅದನ್ನು ನಾವು ಅಳತೆ ಮಾಡಿಸಿಲ್ಲ ಎನ್ನುತ್ತಾರೆ. ನಿಪಿ.1 ರಲ್ಲಿ ನನ್ನ ಹೆಸರು, ನನ್ನ ಮಗನ ಹೆಸರು, ನನ್ನ ಮೈದುನ ಸುರೇಶನ ಹೆಸರು ಇದೆ ಎನ್ನುತ್ತಾರೆ. ಸಾಮಾನ್ಯವಾಗಿ ಉತಾರದಲ್ಲಿ ಸ್ವತ್ತಿನ ಕ್ಷೇತ್ರ ನಮೂದಿಸಲಾಗಿರುತ್ತದೆ, ನಿಪಿ.1 ರಲ್ಲಿ ಕ್ಷೇತ್ರವನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಲ್ಲಿಯೂ ಸಹ ಸ್ವತ್ತಿನ ಕ್ಷೇತ್ರವನ್ನು ನಮೂದಿಸಿಲ್ಲ ಎಂದರೆ ಸರಿ. ನಾನು ಖುಲ್ಲಾ ಜಾಗಕ್ಕೆ ಕರ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಪಾವತಿ ಮಾಡಿರುತ್ತೇನೆ ಎನ್ನುತ್ತಾರೆ.

**3.** ನಿಪಿ.9 ನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿದ್ದೇನೆ . ಕೊಡದೇವನಗಲ್ಲಿಯಲ್ಲಿ ನನ್ನ ಹಳೇ ಮನೆ ಇದೆ ಎಂದು ನಿಪಿ -9 ರಲ್ಲಿ ತೋರಿಸಲಾಗಿದೆ ಎಂದರೆ ಸರಿ. ನಿಪಿ.9 ರಲ್ಲಿ ಮಧ್ಯೆದಲ್ಲಿ ಕೆಂಪು ಬಣ್ಣದಿಂದ ತೋರಿಸಿದ ಮನೆಯನ್ನು ಪ್ರತಿವಾದಿ ಕಟ್ಟಿದ್ದಾರೆ, ಅದರ ಸಂಖ್ಯೆ 140/ಎ. ಗೋಕಾಕ್ ರಸ್ತೆ ಪಕ್ಕದಲ್ಲಿರುವ ಜನತಾ ಪ್ಲಾಟ್ ನಲ್ಲಿರುವ ಮನೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಗೋಕಾಕ್ ರಸ್ತೆ ಪಕ್ಕದಲ್ಲಿರುವ ಜನತಾ ಪ್ಲಾಟ್ ಸಂಖ್ಯೆ 140/1 ನ್ನು ಪ್ರತಿವಾದಿಗೆ ಮಂಜೂರು ಮಾಡಲಾಗಿತ್ತು ಎಂದರೆ ಸಾಕ್ಷಿಯು ಗ್ರಾಮ ಪಂಚಾಯಿತಿಯವರು ಶಾಮೀಲಾಗಿ ಪ್ರತಿವಾದಿಯ ಹೆಸರಿಗೆ ಮಾಡಿದ್ದಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಪ್ಲಾಟ್ ಸಂಖ್ಯೆ 140/1 ಮೊದಲು ಅಂದರೆ ಇಂದಿರಾ ಗಾಂಧಿ ಸಮಯದಲ್ಲಿ ನನಗೆ ಮಂಜೂರಾಗಿತ್ತು

ಎನ್ನುತ್ತಾರೆ. ಪ್ಲಾಟ್ ಸಂಖ್ಯೆ 140/ಎ ರಲ್ಲಿ ಪ್ರತಿವಾದಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ಆ ಸ್ವತ್ತಿಗೆ ಗ್ರಾಮ ಪಂಚಾಯಿತಿಯಲ್ಲಿ ಪಾರ್ವತಿ ಶಿವಾಜಿ ಹುಲಿಕಾಯಿ ರವರ ಹೆಸರನ್ನು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಶಾಮೀಲಾಗಿ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 2007 ರಲ್ಲಿ ಆ ಮನೆಯನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿಯು ನನ್ನನ್ನು ಹೊಡೆದು ದಾದಾಗಿರಿ ಮಾಡಿ ಕಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ಎಷ್ಟು ವರ್ಷಗಳ ಹಿಂದೆ ಆ ಮನೆಯನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ ಈಗ 3 ತಿಂಗಳ ಹಿಂದೆ ಕಟ್ಟಿದ್ದಾರೆ, ನನ್ನನ್ನು, ನನ್ನ ಮಗನನ್ನು ಹೊಡೆದು ಕಟ್ಟಿದ್ದಾರೆ ಎನ್ನುತ್ತಾರೆ. 2007 ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಕಟ್ಟಲಾಗಿದೆ ಎಂದು ದಾಖಲೆಗಳಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿ ನಾನು ಯಾವತ್ತೂ ಆ ಸ್ವತ್ತನ್ನು ಕೊಟ್ಟಿಲ್ಲ ಎನ್ನುತ್ತಾರೆ. 2007 ರಲ್ಲಿ ಮನೆ ಕಟ್ಟಿದ್ದರೂ ಸಹ 2017 ರಲ್ಲಿ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

**4.** ನನ್ನ ತಂದೆ ಹೆಸರು ನಾಗಪ್ಪ, ಅವರ ಮೊದಲನೇ ಮಗನ ಹೆಸರು ಶೆಟ್ಟಿಪ್ಪ, 2 ನೆಯವರು ಮಹದೇವ, 3 ನೆಯವರು ಶಿವಾಜಿ ಅವರೇ ಪ್ರತಿವಾದಿ, ನನ್ನ ತಂಗಿ ಹೆಸರು ಶಾಂತ, ನಾನೇ ನನ್ನ ತಂದೆಗೆ ದೊಡ್ಡ ಮಗಳು. ನನ್ನ ಗಂಡ ನನಗೆ ಸೋದರ ಮಾವ. ನನ್ನನ್ನು ಚಿಕ್ಕವಳಿದ್ದಾಗಲೇ ಮದುವೆ ಮಾಡಿಕೊಟ್ಟಿದ್ದಾರೆ. ಪ್ಲಾಟ್ ಸಂಖ್ಯೆ 140/ಎ ರಲ್ಲಿ ಪ್ರತಿವಾದಿಯ ಹೆಂಡತಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ಪ್ಲಾಟ್ ಸಂಖ್ಯೆ 140 ರಲ್ಲಿ ನನಗೆ ಮತ್ತು ಸುರೇಶ ರವರಿಗೆ ಹಕ್ಕು ಇದೆ ಎಂದರೆ ಸರಿ. ನಮಗೆ ಮತ್ತು ಸುರೇಶನ ಮಧ್ಯೆ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಕ್ರಿಮಿನಲ್ ಪ್ರಕರಣ ಸಂಖ್ಯೆ 194/2018 ದಾಖಲಾಗಿದೆ, ಅದು ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸಿ.ಸಿ. ನಂಬರ್ 83/2022 ಮತ್ತು 803/2021 ರ ಪ್ರಕರಣಗಳು

ಚಾಲ್ತಿಯಲ್ಲಿವೆ ಎಂದರೆ ಸರಿ. ಸಿ.ಸಿ. ನಂಬರ್ 803/2021 ರಲ್ಲಿ ನಾವು ಆರೋಪಿಗಳು ಎಂದರೆ ಸರಿ. ಪ್ರತಿವಾದಿ ರವರು ಮನೆ ಕಟ್ಟುವ ದಿನಗಳಂದು ನಾನು ಅವರಿಗೆ ಅಡ್ಡಿ ಪಡಿಸಿ ದಾಖಲೆಗಳನ್ನು ಸೃಷ್ಟಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ನಾವು ತಡೆಯುತ್ತಿದ್ದರೂ ಸಹ ಪ್ರತಿವಾದಿ ಮನೆ ಕಟ್ಟುತ್ತಾ ಬಂದಿದ್ದಾರೆ ಎನ್ನುತ್ತಾರೆ. 2007 ರಲ್ಲಿ ಮನೆ ಕಟ್ಟಿದರೂ ಸಹ 2017 ರಿಂದ ನಾನು ಶೆಟ್ಟಪ್ಪ ರವರ ಮಾತು ಕೇಳಿ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೈದುನ ಜೊಯೊಡಾದ ಭಗವತಿಯಲ್ಲಿ ಇದ್ದಾನೆ ಎಂದೂ ಗೊತ್ತಿದ್ದರೂ ಸಹ ಅವರಿಗೂ ಸಹ ಪಾಲು ಕೊಡಬಾರದೆಂದು ಸುಳ್ಳು ವಿಳಾಸ ತೋರಿಸಿ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ಮೈದುನ ವಿಭಾಗ ಪಾಲು ಕೇಳಿ ಬಂದಿಲ್ಲ ಎನ್ನುತ್ತಾರೆ.

**5.** ನಿಪಿ.5 ರಿಂದ 7 ಪೋಟೋಗಳು 2017 ರಲ್ಲಿ ತೆಗೆದ ಪೋಟೋಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ.12 ರಿಂದ 15 ಮತ್ತು ನಿಪಿ-16 ಗಳು ಸುಳ್ಳು ದೂರು ನೀಡಲು ಸೃಷ್ಟಿಸಿದ ಪೋಟೋಗಳಾಗಿವೆ ಎಂದರೆ ಸರಿಯಲ್ಲ. ನಿಪಿ.17 ರಿಂದ 19 ಗಳು ಪೊಲೀಸರಿಗೆ ನೀಡುವ ಉದ್ದೇಶದಿಂದ ಸೃಷ್ಟಿಸಿದ ಪೋಟೋಗಳಾಗಿವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪೊಲೀಸರು ಮತ್ತು ಗ್ರಾಮ ಪಂಚಾಯಿತಿಯವರು ಶಾಮೀಲಾಗಿದ್ದಾರೆ ಎನ್ನುತ್ತಾರೆ, ಪೊಲೀಸರು ಯಾವುದೇ ತನಿಖೆ ಮಾಡಿಲ್ಲ ಎನ್ನುತ್ತಾರೆ. ಗ್ರಾಮ ಪಂಚಾಯಿತಿ ನಂ.140 ರಲ್ಲಿ 20X300 ಅಡಿ ಜಾಗ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿ ನಂ.140 ರಲ್ಲಿ 20X40 ಅಡಿ ಜಾಗದಲ್ಲಿ ಮನೆ ಕಟ್ಟಿದ ಜಾಗ ಮಾತ್ರ ನನ್ನದು , ಉಳಿದ ಜಾಗದಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮದುವೆಯಾಗಿ ಬಂದಾಗಿನಿಂದಲೂ ಅದೇ ಮನೆಯಲ್ಲಿ

ಇದ್ದೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಕಳೆದ ವರ್ಷ ಆ ಮನೆ ಬಿದ್ದು ಹೋಗಿದೆ, ಈಗ ನಾನು ಪ್ಲಾಟ್ ನಲ್ಲಿ ಇದ್ದೇನೆ ಎನ್ನುತ್ತಾರೆ. ಗ್ರಾಮ ಪಂಚಾಯಿತಿ ಸಂಖ್ಯೆ 140/ಅ ಮತ್ತು 140/1 ಮತ್ತು ಇತರೆ ಸುತ್ತಮುತ್ತ ಇರುವ ಗ್ರಾಮ ಠಾಣಾದಲ್ಲಿ ಜನತಾ ಮನೆಗಳಿಗೆ ಪಂಚಾಯಿತಿಯವರು ನಿವೇಶನಗಳನ್ನು ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಅದು ಗ್ರಾಮ ಠಾಣಾ ಅಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**